ರಾಜ್ಯದಲ್ಲಿರುವ ಸರ್ಕಾರಿ ಪ್ರಾಥಮಿಕ, ಮಾಧ್ಯಮಿಕ ಮತ್ತು ಪೌಢಶಾಲೆಗಳ ಬಗ್ಗೆ

೧೫೬. ಶ್ರೀ ಕೆ. ಎಚ್. ರಂಗನಾಥ್ (ಹಿರಿಯೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ರಾಜ್ಯದಲ್ಲಿ ಒಟ್ಟು ಪ್ರಾಥಮಿಕ, ಹಿರಿಯ ಪ್ರಾಥಮಿಕ ಮತ್ತು ಪೌಢಶಾಲೆಗಳ ಸಂಖ್ಯೆ ಹಾಗೂ ಒಟ್ಟು ಮಂಜೂರಾಗಿರುವ ಶಿಕ್ಷಕರ ಸಂಖ್ಯೆ ಮತ್ತು ಈಗ ಹಾಲಿ ಕೆಲಸ ಮಾಡುತ್ತಿರುವ ಶಿಕ್ಷಕರ ಸಂಖ್ಯೆ ಎಷ್ಟು ?

ಆ) ಮಂಜೂರಾದ ಹುದ್ದೆಗಳಿಗಿಂತ ಈಗ ಕೆಲಸ ಮಾಡುತ್ತಿರುವ ಶಿಕ್ಷಕರ ಸಂಖ್ಯೆಯು ಕಡಿಮೆಯಿದೆಯೇ ಇದ್ದರೆ ಯಾವಾಗಿನಿಂದ ಕಡಿಮೆಯಿರುತ್ತದೆ ಹಾಗೂ ಸರಕಾರವು ಈ ಖಾಲಿ ಇರುವ ಹುದ್ದೆಗಳನ್ನು ತುಂಬಲು ಹಾಗೂ ಶಿಕ್ಷಕರನ್ನು ಶಾಲೆಗಳಿಗೆ ಒದಗಿಸಲು ಕೈಕೊಂಡಿರುವ ಕ್ರಮಗಳೇನು ? (ವಾರ್ಷಿಕವಾರು ಅಂಕಿಗಳನ್ನು ಕೊಡುವುದು)

ಇ) ರಾಜ್ಯದಲ್ಲಿ ಒಟ್ಟು ಟಿ.ಸಿ.ಹೆಚ್. ತರಬೇತಿ ಪಡೆದ ನಿರುದ್ಯೋಗಿಗಳು, ಬಿ.ಎಡ್, ತರಬೇತಿ ಪಡೆದ ಒಟ್ಟು ನಿರುದ್ಯೋಗಿಗಳ ಸಂಖ್ಯೆ ಎಷ್ಟು ? (ಕಳೆದ ಮೂರು ವರ್ಷಗಳ ಸಂಖ್ಯೆಯನ್ನು ಕೊಡತಕ್ಕದ್ದು)

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

ಅ)

ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳು	೨೨,೫೫೯
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು	೧೧,೪೩೨
ಸರ್ಕಾರಿ ಪ್ರೌಢ ಶಾಲೆಗಳು (ಸರ್ಕಾರಿ ಕಾಂಪೋಜಿಟ್ ಜೂ. ಕಾಲೇಜುಗಳು ಸೇರಿದಂತೆ)	೧,೧೧೯
ಮಂಜೂರಾಗಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು	೧,೧೪,೭೪೯
ಹಾಲಿ ಕೆಲಸ ಮಾಡುತ್ತಿರುವ ಪ್ರಾಥಮಿಕ ಶಾಲಾ ಶಿಕ್ಷಕರು	೧,೦೧,೦೫೨
ಮಂಜೂರಾಗಿರುವ ಪೌಢಶಾಲಾ ಶಿಕ್ಷಕರ ಹುದ್ದೆಗಳು	೧೦,೧೮೦
ಹಾಲಿ ಕೆಲಸ ಮಾಡುತ್ತಿರುವ ಪ್ರೌಢಶಾಲಾ ಶಿಕ್ಷಕರು	೮,೫೫೨

ಆ) ಹೌದು

ಪ್ರಾಥಮಿಕ ಶಾಲಾ ಶಿಕ್ಷಕರು :

೧೦-೪-೧೯೮೨ರಲ್ಲಿನಂತೆ ೪೨೫೮ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಖಾಲಿ ಇದ್ದವು. ೧೯೮೨ರ ಮೇ ಮಾಹೆಯಲ್ಲಿ ೫೦೦೦ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಕನ್ನಡೇತರ ಶಾಲೆಗಳಿಗಾಗಿ ಮಂಜೂರು ಮಾಡಲಾಯಿತು. ೬೨೮೩ ಅಭ್ಯರ್ಥಿಗಳನ್ನು ೧೯೮೧ ವಿಶೇಷ ನಿಯಮಗಳನ್ವಯ ಆಯ್ಕೆ ಮಾಡಿ ಪ್ರಾಥಮಿಕ ಶಾಲಾ ಶಿಕ್ಷಕರನ್ನಾಗಿ ನೇಮಕ ಮಾಡಲಾಯಿತು.

೧೦-೪-೧೯೮೩ರಲ್ಲಿನಂತೆ, ೧೩,೬೭೭ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತವೆ. ಈ ಹುದ್ದೆಗಳಲ್ಲಿ ೭,೨೯೨ ಸ್ಥಳೀಯ ಅಭ್ಯರ್ಥಿಗಳು ಕೆಲಸ ಮಾಡುತ್ತಿರುತ್ತಾರೆ.

ಖಾಲಿ ಇರುವ ಎಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಈಗಾಗಲೇ ರಚಿತವಾಗಿರುವ ಜಿಲ್ಲಾ ಮಟ್ಟದ ನೇಮಕಾತಿ ಸಮಿತಿಯ ಮೂಲಕ ಭರ್ತಿ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ.

ಪ್ರೌಢ ಶಾಲಾ ಶಿಕ್ಷಕರು :

೧೯೪೧–೪೨ರಲ್ಲಿ ೧೬೩೧ ಪ್ರೌಢಶಾಲಾ ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತವೆ. ೧೯೪೧–೪೨ರಲ್ಲಿ ೭೨೫ ಸ್ಥಳೀಯ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲಾಯಿತು.

೧೯೪೨–೪೩ರಲ್ಲಿ ೧೬೩೬ ಪ್ರೌಢಶಾಲಾ ಶಿಕ್ಷಕರ ಹುದ್ದೆಗಳು ಖಾಲಿ ಇದ್ದವು. ೧೯೪೧ ವಿಶೇಷ ನಿಯಮಗಳನ್ವಯ ಆಯ್ಕೆಯಾಗಿದ್ದ ೧೪೮೫ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲಾಯಿತು. ೧೯೪೩ರಲ್ಲಿ, ೧೬೨೮ ಪ್ರೌಢಶಾಲಾ ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತವೆ, ಮತ್ತು ೭೩೦ ಸ್ಥಳೀಯ ಅಭ್ಯರ್ಥಿಗಳು ಈ ಖಾಲಿ ಹುದ್ದೆಗಳಲ್ಲಿ ಕೆಲಸ ಮಾಡುತ್ತಿರುತ್ತಾರೆ.

ಪ್ರೌಢಶಾಲಾ ಶಿಕ್ಷಕರ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಕರ್ನಾಟಕ ಲೋಕ ಸೇವಾ ಆಯೋಗವನ್ನು ವಿನಂತಿಸಿಕೊಳ್ಳಲಾಗಿದೆ. ಆದರೂ, ಪ್ರೌಢಶಾಲಾ ಶಿಕ್ಷಕರ ಆಯ್ಕೆಯನ್ನು ವಿಶೇಷ ನೇಮಕಾತಿ ನಿಯಮಗಳನ್ನು ಹೊರಡಿಸುವ ಮೂಲಕ ವಿಭಾಗ ಮಟ್ಟದ ನೇಮಕಾತಿ ಸಮಿತಿಗೆ ಒಪ್ಪಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

೩) ಮಾಹಿತಿಯು ಸಿಗುವುದಿಲ್ಲ.

೧೯೪೧, ೧೯೪೨, ೧೯೪೩ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಟಿ.ಡಿ ಬಿ.ಗಳು ಹರಿಜನ ಮತ್ತು ಗಿರಿಜನರಿಗೆ ಶ್ರೇಯೋಭಿವೃದ್ಧಿಗಾಗಿ ಒದಗಿಸಿದ ಹಣದ ಬಗ್ಗೆ

೧೯೪. ಶ್ರೀ ಪಿ. ಪಿ. ಹೆಗರೆ (ಚಿಕ್ಕೋಡಿ). — ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:—

ಅ) ೧೯೪೦–೪೧, ೪೧–೪೨ ಮತ್ತು ೧೯೪೨–೪೩ನೇ ಸಾಲಿನಲ್ಲಿ, ಬೆಳಗಾವಿ ಜಿಲ್ಲೆಯ, ತಾಲ್ಲೂಕು ಅಭಿವೃದ್ಧಿ ಮಂಡಲಿಗಳು, ಹರಿಜನ ಮತ್ತು ಗಿರಿಜನರ ಶ್ರೇಯೋಭಿವೃದ್ಧಿಗಾಗಿ ಒದಗಿಸಿದ ಹಣವೆಷ್ಟು? (ಪೂರ್ಣ ವಿವರಗಳನ್ನು ನಮೂದಿಸಬೇಕು).

ಆ) ಮೇಲ್ಕಂಡ ಅವಧಿಗಳಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ಖರ್ಚು ಮಾಡಿದ ಹಣ ಹಾಗೂ ಸದರಿ ಹಣವನ್ನು ಖರ್ಚು ಮಾಡಿದ ವಿವಿಧ ಕಾರ್ಯಗಳ ವಿವರಗಳೇನು?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು). —

ಅ) ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ಹರಿಜನ ಮತ್ತು ಗಿರಿಜನ ಶ್ರೇಯೋಭಿವೃದ್ಧಿಗೆ ಒದಗಿಸಿದ ಹಣದ ವಿವರಗಳು ಈ ಕೆಳಗಿನಂತಿರುತ್ತದೆ.

ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಹೆಸರು	೧೯೪೦–೪೧	೧೯೪೧–೪೨	೧೯೪೨–೪೩
೧) ಅಥಣಿ	೧೦೦೦೦೦	೪೦೦೦೦	೯೦೦೦೦
೨) ರಾಯಬಾಗ್	೫೪೦೦೦	೯೨೬೦	೯೬೦೦೦
೩) ಚಿಕ್ಕೋಡಿ	೧೨೦೦೦೦	೯೪೬೫೫	೯೯೨೫೫
೪) ಹುಕ್ಕೇರಿ	೪೧೩೬೦	೪೩೦೨೪	೫೬೨೫೦
೫) ಬೆಳಗಾಂ	೧೦೦೪೧೯	೯೨೬೪೪	೯೪೪೦೦
೬) ಖಾನಾಪುರ	೪೫೪೪೪೬	೬೧೨೪೪	೪೯೪೨೦
೭) ಬೈಲಹೊಂಗಲ	೯೨೦೬೩	೯೬೫೦೦	೭೨೦೦೦
೮) ಸೌಂದತ್ತಿ	೭೦೭೭೬	೪೪೨೦೦	೫೫೩೦೩
೯) ರಾಮದುರ್ಗ	೭೦೨೦೦	೪೯೨೯೬	೪೫೫೯೦
೧೦) ಗೋಕಾಕ್	೯೭೪೪೬	೪೯೪೪೦	೭೦೧೩೦
	೪೩೬೧೧೦	೭೫೪೭೧೧	೭೨೬೩೪೪